# ಸಂಕೇತದ ನೆಪದಲ್ಲಿ...

‘ಬೆಂಗಳೂರು ಕೊಟ್ಟ ಒಂದು ಸಂಕೇತ’ – ಎಲ್.ಎಸ್. ಶೇಷಗಿರಿ ರಾವ್ ಅವರ ಬರಹವೊಂದರ ಶೀರ್ಷಿಕೆ. 1989ರ ಡಿಸೆಂಬರ್ 17ರಂದು ‘ಪ್ರಜಾವಾಣಿ’ ಮತ್ತು ‘ಇಂಡಿಯನ್ ಎಕ್ಸ್‌ಪ್ರೆಸ್’ಗಳಲ್ಲಿ ಪ್ರಕಟವಾದ ಒಂದೇ ವಿಷಯಕ್ಕೆ ಸಂಬಂಧಿಸಿದ ಫೋಟೊ ಮತ್ತು ವಿವರಗಳಿಗೆ ಪ್ರತಿಕ್ರಿಯೆ ರೂಪದ ಲೇಖನದಲ್ಲಿ ಎಲ್‌ಎಸ್‌ಎಸ್ ದಾಖಲಿಸಿರುವುದು ಹೀಗೆ:

“ಒಬ್ಬ ಭಿಕ್ಷುಕಿಯ ಹೆಣ ರಸ್ತೆಯ ಬದಿಯಲ್ಲಿ ಬಿದ್ದಿದೆ. ದೇಹದ ಬಳಿ ರಸ್ತೆಯ ಹೆಸರನ್ನು ಹೇಳುವ ಸಣ್ಣ ಕಂಬ, ಒಂದು ರಿಕ್ಷಾ. ಕನ್ನಡ ಪತ್ರಿಕೆಯಲ್ಲಿ ಈ ಹೆಣಕ್ಕೆ ಬೆನ್ನು ತಿರುಗಿಸಿ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಹೋಗುತ್ತಿದ್ದಾನೆ. ಒಬ್ಬರು ಬೈಸಿಕಲ್ ಮೇಲೆ ಬರುತ್ತಿದ್ದಾರೆ. ಕನ್ನಡ ಪತ್ರಿಕೆಯ ವಿವರಣೆ ಹೇಳುತ್ತದೆ: ‘ಬೆಂಗಳೂರು ಮಲ್ಲೇಶ್ವರದ ರಸ್ತೆಯೊಂದರ ಪುಟ್ಟ ಪಥದ ಮೇಲೆ ಶನಿವಾರ ಭಿಕ್ಷುಕಿಯೊಬ್ಬಳ ಶವ ಬಿದ್ದುದು ಕಂಡು ಬಂದಿತು. ಈ ಬಗ್ಗೆ ಬೆಳಗ್ಗೆ 10 ಗಂಟೆಗೆ ‘ಪ್ರಜಾವಾಣಿ’ಗೆ ಕರೆಯೊಂದು ಬಂತು. ಪೊಲೀಸರಿಗೆ ಈ ಬಗ್ಗೆ ಈ ಮೊದಲು ತಾವು ತಿಳಿಸಿದ್ದುದಾಗಿಯೂ ಆದರೆ ಈವರೆಗೆ ಯಾವುದೇ ಕ್ರಮ ಜರುಗಿಸಿಲ್ಲವೆಂದೂ ಟೆಲಿಫೋನ್ ಮಾಡಿದವರು ತಿಳಿಸಿದರು. ಬೆಳಗಿನ ಜಾವದಿಂದಲೂ ಆ ಹೆಣ ಅಲ್ಲೇ ಬಿದ್ದಿದೆಯೆಂದು 10.45ಕ್ಕೆ ಅಲ್ಲಿಗೆ ಹೋಗಿ ಮೇಲಿನ ಚಿತ್ರ ತೆಗೆದ ನಮ್ಮ ಛಾಯಾಚಿತ್ರಗಾರನಿಗೆ ನೆರೆಹೊರೆಯವರು ತಿಳಿಸಿದರು.’ ‘ಇಂಡಿಯನ್ ಎಕ್ಸ್‌ಪ್ರೆಸ್’ ವಿವರಣೆಯ ಕನ್ನಡ ಅನುವಾದ: ‘ಕಾಲ ತುಂಬಾ ಬೆಲೆ ಬಾಳುವಂಥದು. ಆದರೆ ಪ್ರಾಣ ಇನ್ನೂ ಬೆಲೆ ಬಾಳುವಂಥದು ಎನ್ನುತ್ತದೆ ಸತ್ತ ಹೆಂಗಸಿನ ದೇಹದ ಹಿಂದಿರುವ ಟೆಲಿಫೋನ್ ಕಂಬದ ಮೇಲಿರುವ ಫಲಕ, ನಿಜ. ಕಾಲ ಎಷ್ಟು ಅಮೂಲ್ಯ ಎಂದರೆ ಐದು ದಿನ ಮಲ್ಲೇಶ್ವರದ ಕೆ.ಸಿ. ಆಸ್ಪತ್ರೆಯ ಮುಂದೆ ನೆರವಿಗಾಗಿ ಆಕ್ರಂದಿಸುತ್ತಿದ್ದ ಈ ಹೆಂಗಸಿನತ್ತ ನೋಡಲು ಯಾರಿಗೂ ಸಮಯವಿರಲಿಲ್ಲ. ಶನಿವಾರ ಬೆಳಗ್ಗೆ ಆಕೆಯ ಪ್ರಾಣ ಹೋಗಿದ್ದುದು ಕಂಡಿತು. ಮತ್ತೆ, ಆ ದೇಹವನ್ನು ಸಾಗಿಸಲು ಗಂಟೆಗಟ್ಟಲೆ ಯಾರೂ ಗಮನಕೊಡಲಿಲ್ಲ.”

ಇಷ್ಟು ಸುದ್ದಿ ವಿವರವನ್ನು ದಾಖಲಿಸುವ ಎಲ್‌ಎಸ್‌ಎಸ್, ವಿಜಯನಗರದ ರಾಜಧಾನಿ ಹಂಪೆಯಲ್ಲಿ, ಆಭರಣಗಳನ್ನು ತೊಟ್ಟ ಸುಂದರ ತರುಣಿ ನಡುರಾತ್ರಿಯಲ್ಲಿ ನಡೆದುಕೊಂಡು ಹೋಗಬಹುದೆಂದು ವಿದೇಶಿ ಯಾತ್ರಿಕರು ದಾಖಲಿಸಿದ್ದನ್ನು ನೆನಪಿಸಿಕೊಳ್ಳುತ್ತಾರೆ; ‘ಹಂಪೆಯ ಉತ್ತರಾಧಿಕಾರಿಯಾದ ಬೆಂಗಳೂರಿನಲ್ಲಿ ಒಬ್ಬ ಹೆಂಗಸು ಐದು ದಿನ ರಸ್ತೆಯಲ್ಲಿ ಆಕ್ರಂದಿಸುತ್ತ ಬಿದ್ದಿದ್ದು, ಕೊನೆಗೂ ನೆರವು ದೊರೆಯದೆ ಪ್ರಾಣ ಬಿಟ್ಟಳೆಂದರೆ, ಹೆಣವನ್ನು ಯಾರೂ ಗಂಟೆಗಟ್ಟಲೆ ಸಾಗಿಸಲಿಲ್ಲವೆಂದರೆ ನಾಚಿಗೆಗೇಡು’ ಎನ್ನುತ್ತಾರೆ. ಭಿಕ್ಷುಕಿಯೊಬ್ಬಳ ದಾರುಣ ಅಂತ್ಯದ ನೆಪದಲ್ಲಿ ಎಲ್‌ಎಸ್‌ಎಸ್ ಮಾಡಿರುವ ಈ ಟಿಪ್ಪಣಿಗಳು ಕೊರೊನಾ ಕಾಲದ ಘಟನೆಗಳನ್ನು ನೆನಪಿಸುವಂತಿವೆ. ಆ ಸಂದರ್ಭದಲ್ಲಿ ಸಾವುಗಳ ಬಗ್ಗೆ, ರೋಗಿಗಳ ಬಗ್ಗೆ ನಾವು ನಡೆದುಕೊಂಡಿದ್ದು ಹೇಗೆ? ಅನೇಕ ರೋಗಿಗಳನ್ನು ಉಪಚರಿಸಿದ ವೈದ್ಯನೊಬ್ಬ ಕೊರೊನಾ ಸೋಂಕಿಗೆ ಬಲಿಯಾದಾಗ, ಅವನ ಅಂತ್ಯಸಂಸ್ಕಾರಕ್ಕೆ ಅಡ್ಡಿಯುಂಟು ಮಾಡಿದ ಸಮಾಜ ನಮ್ಮದು.

‘ಏನಾಗಿದೆ ಈ ಸಮಾಜಕ್ಕೆ?’ ಎನ್ನುವ ಎಲ್‌ಎಸ್‌ಎಸ್, ಮಾನವೀಯ ಸ್ಪಂದನಗಳಿಗೆ ಉದಾಹರಣೆಯಾಗಿ ಮದರ್ ತೆರೇಸಾ ಅವರನ್ನು ನೆನಪಿಸಿಕೊಳ್ಳುತ್ತಾರೆ. “ಕಲ್ಕತ್ತದಂತಹ ಊರಿನಲ್ಲಿ ಮದರ್ ಥೆರೇಸಾ ಅವರ ಕಚೇರಿಗೆ ದೂರವಾಣಿಯಲ್ಲಿ ಹೇಳಿದರೆ ಸಾಕು, ಅವರು ಬಂದು ಕರೆದುಕೊಂಡು ಹೋಗುತ್ತಾರೆ. ಮದರ್ ಥೆರೇಸಾ ಈ ದೇಶದಲ್ಲಿ ಹುಟ್ಟಿದವರಲ್ಲ. ಇಲ್ಲಿನ ಬಹುಮಂದಿಯ ಧರ್ಮಕ್ಕೆ ಸೇರಿದವರಲ್ಲ. ಬೆಳಗ್ಗೆ ಸೂರ್ಯ ಹುಟ್ಟುವ ಮುನ್ನ ಪ್ರಾರ್ಥನೆಗಳನ್ನು ಧ್ವನಿವರ್ಧಕದ ಮೂಲಕ ಬಿತ್ತರಿಸಿ ಮಲಗಿರುವ ಎಳೆಯ ಮಕ್ಕಳನ್ನೂ ಮಲಗಲು ಬಿಡದೆ ಮೇಲಾಟಕ್ಕೆ ಸ್ಪರ್ಧಿಸುವ ಪೂಜಾಸ್ಥಳಗಳಿರುವ ಈ ಊರಿನಲ್ಲಿ, ಯಾವುದೇ ಧರ್ಮದವರ ಉತ್ಸವ ಎಂದರೆ ಕಾಲಿಡಲಾಗದಂತೆ ಭಕ್ತರು ಕಿಕ್ಕಿರಿಯುವ ಈ ಊರಿನಲ್ಲಿ, ಆಹ, ಎಲ್ಲಡಗಿದೆಯೋ ಆರ್ಯಧರ್ಮದ ಕುರಣ, ಆರ್ಯ ಜನಗಳ ಮರುಕ, ಉರಿಯುವನೆ ಬಲ್ಲ.”

ಎಲ್‌ಎಸ್‌ಎಸ್ ಅವರ ಬರಹದಲ್ಲಿನ ಥೆರೇಸಾ, ಧರ್ಮ, ಧಾರ್ಮಿಕ ಪ್ರಾರ್ಥನೆ, ಧಾರ್ಮಿಕ ಉತ್ಸವಗಳು – ಇವುಗಳಿಗೆಲ್ಲ ಅಡಿಗೆರೆ ಎಳೆದು ನಾವು ಓದಿಕೊಳ್ಳಬೇಕು. ಈ ಎಲ್ಲ ಶಬ್ದಗಳಿಗೆ ಪ್ರಸ್ತುತ ಬೇರೆಯದೇ ಅರ್ಥಗಳು!

“ಅನಾಥೆಯೊಬ್ಬಳ ಯಾತನೆಯನ್ನು ಕಂಡ ನೂರಾರು ಮಂದಿಯಲ್ಲಿ ಯಾರೂ ಏನೂ ಮಾಡಲಿಲ್ಲ ಎಂದರೆ ಜನತೆಯ ಸತ್ವವೇ ನಾಶವಾಗಿದೆ ಎಂದರ್ಥ. ನಿನಗೇನಾಗಿದೆ? ಏನು ಬೇಕು? ಎಂದು ವಿಚಾರಿಸಿ ಒಂದು ಪರಿಹಾರ ಕಾಣಿಸುವ ಮನಸ್ಸು–ಶಕ್ತಿ ಯಾರಲ್ಲಿಯೂ ಇಲ್ಲದೆ ಲುಪ್ತವಾಗಿದ್ದರೆ ಹೀಗಾಗುವಂತೆ ಸಮಾಜ ಏನು ಮಾಡಿದೆ? ನಾಲ್ಕಾರು ಅಂತಸ್ತುಗಳ ಮನೆಗಳು, ಮಾರುತಿ ಕಾರುಗಳು, ವಿಮಾನಗಳು ಏರುವ ಇಳಿಯುವ ವಿಮಾನ ನಿಲ್ದಾಣ, ಇಂತಹವು ಮಾತ್ರವೇ ನಾಗರಿಕತೆಯ ಹೊರ ಸಂಕೇತಗಳೇ? ನಾಗರಿಕ ಮನಸ್ಸು ಹೃದಯ, ಕರ್ತೃತ್ವಶಕ್ತಿ ಏನಾದವು. ಮನುಷ್ಯರನ್ನು ರೂಪದಲ್ಲಿ ಮಾತ್ರವಲ್ಲದೆ ಸ್ವಭಾವದಲ್ಲೂ ಅಂತಃಕರಣದಲ್ಲೂ ಮನುಷ್ಯರನ್ನಾಗಿ ಉಳಿಸುವ ಶಕ್ತಿಗಳು ನಗರಗಳಲ್ಲಿ ಬಲಗುಂದುತ್ತವೆ.’’

“ನನಗಂತೂ ಇನ್ನೂ ಆ ಭಿಕ್ಷುಕಿಯ ಚಿತ್ರವನ್ನು ಮರೆಯಲು ಸಾಧ್ಯವಾಗಿಲ್ಲ. ಈ ನಿರ್ಭಾಗ್ಯೆ ಬೇರಾವ ರೀತಿಯಲ್ಲಿಯೂ ಪತ್ರಿಕೆಗಳಲ್ಲಿ ಪ್ರಸಿದ್ಧಿಗೆ ಬರುವವಳಲ್ಲ. ಈಗಲೂ ಅವಳ ಹೆಸರು ತಿಳಿಯದು. ಅವಳೊಬ್ಬ ಭಿಕ್ಷುಕಿ. ಅವಳೊಂದು ಸಂಕೇತ. ಈ ಸಮಾಜದಲ್ಲಿ ಯಾರ ಅನುಕಂಪವೂ ಇಲ್ಲದೆ ಸಾಯುತ್ತಿರುವ ನಿರ್ಭಾಗ್ಯರ ಸಂಕೇತ. ಈ ಸಮಾಜದ ರೋಗಗ್ರಸ್ತ ಸ್ಥಿತಿಯ ಸಂಕೇತ.”

ಎಲ್‌ಎಸ್‌ಎಸ್ ಅವರ ಜನ್ಮಶತಮಾನೋತ್ಸವದ ಆಚರಣೆ ಈಗ ನಡೆಯುತ್ತಿದೆ. ಈ ಸಂದರ್ಭದಲ್ಲಿ, ಮೂವತ್ತೈದು ವರ್ಷಗಳ ಹಿಂದಿನ ಎಲ್‌ಎಸ್‌ಎಸ್ ಬರಹವನ್ನು ಗಮನಿಸಿದರೆ, ಅದು ಇಂದಿನ ವರ್ತಮಾನವನ್ನೇ ಪ್ರಶ್ನಿಸುತ್ತಿದೆ ಎನ್ನಿಸುವುದಿಲ್ಲವೆ?

■ **ಚಂಪಕಮಾಲಾ**

## ಮಾತೇ ಮುತ್ತು

- ಇದ್ದಷ್ಟು ದಿನವಾರೆ ಇರುವಷ್ಟು ಪ್ರೀತಿಯ ಇನ್ನಷ್ಟು ರುಚಿ ಮಾಡಿ ತೆರಳುವುದು.
  –ದ.ರಾ. ಬೇಂದ್ರೆ
- ಧರ್ಮ ಎನ್ನುವುದು ಲೋಕದ ಹಿತಕ್ಕಾಗಿಯೇ ಹೊರತು; ಲೋಕ ಧರ್ಮದ ಹಿತಕ್ಕಾಗಿ ಅಲ್ಲ.
  –ಡಿ.ವಿ.ಜಿ.
- ನೀವು ಗುಣಾತ್ಮಕವಾಗಿ ಯೋಚಿಸುವುದಿಲ್ಲ ಎಂದಾದಲ್ಲಿ ಕನಿಷ್ಠ ಪಕ್ಷ ಸುಮ್ಮನಾದರೂ ಇರಿ.
  – ಜೋಯೆಲ್ ಆಸ್ಟಿನ್
- ಪ್ರೀತಿಯಲ್ಲಿ ಬೀಳುವುದಕ್ಕೆ ಗುರುತ್ವಾಕರ್ಷಣ ಶಕ್ತಿಯನ್ನು ಬೈದು ಪ್ರಯೋಜನವಿಲ್ಲ. ಅದೊಂದು ಜೈವಿಕ ಕ್ರಿಯೆ; ಭೌತ ಮತ್ತು ರಸಾಯನಶಾಸ್ತ್ರಕ್ಕೆ ಅಲ್ಲಿ ಸ್ಥಳವಿಲ್ಲ.
  –ಆಲ್ಬರ್ಟ್ ಐನ್‌ಸ್ಟೀನ್
- ಪ್ರತಿಭೆಗೆ ಶಾಸ್ತ್ರಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.
  –ತ.ರಾ.ಸು.
- ದೊಡ್ಡ ಯೋಚನೆಗಳೊಡನೆ ಇರುವವರು ಎಂದೂ ಏಕಾಂಗಿಗಳಲ್ಲ.
  –ಸರ್. ಫಿಲಿಪ್ ಸಿಡ್ನಿ
- ನನ್ನ ಅಜ್ಜ ಯಾರೆಂದು ನನಗೆ ಗೊತ್ತಿಲ್ಲ; ಆದರೆ ಆತನ ಮೊಮ್ಮಗ ಏನಾಗಬೇಕೆಂದು ನನಗೆ ಗೊತ್ತಿದೆ.
  –ಅಬ್ರಹಾಂ ಲಿಂಕನ್
- ಜಗತ್ತಿನಲ್ಲಿ ಹೇಳುವವರಿಗಿಂತ, ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು.
  –ಗಳಗನಾಥ
- ಜಾತಿಯನ್ನು ಕೇಳಬೇಡಿ, ಹೇಳಬೇಡಿ ಮತ್ತು ಅದರ ಬಗ್ಗೆ ಚಿಂತಿಸಲೂಬೇಡಿ.
  –ನಾರಾಯಣ ಗುರು
- ಕಾಲದ ಮರಳಿನಲ್ಲಿ ಹೆಜ್ಜೆಗುರುತುಗಳನ್ನು ಬಿಡು. ಕಾಲನ್ನೆಳೆಯುತ್ತಾ ನಡೆಯಬೇಡ.
  –ಎ.ಪಿ.ಜೆ. ಅಬ್ದುಲ್ ಕಲಾಂ